ಗರ್ಭನಿರೋಧಕ ಶಸ್ತ್ರಚಿಕಿತ್ಸೆ ಮಾಡುವುದಿಲ್ಲ. ನಮ್ಮ ಶಿಬಿರಗಳಲ್ಲಿರುವ ಕೆಲವು ಆನೆಗಳಿಗೆ ಪ್ರಾಯೋಗಿಕವಾಗಿ ಮೊದಲು ಈ ಚುಚ್ಚುಮದ್ದು ನೀಡುತ್ತೇವೆ. ಅಲ್ಲಿ ಯಶಸ್ವಿಯಾದರೆ ಅಗತ್ಯ ಸಂದರ್ಭದಲ್ಲಿ ಬೇರೆಡೆಯೂ ಜನನ ನಿಯಂತ್ರಣಕ್ಕೆ ಬಳಸಬಹುದಾದ ವೈಜ್ಞಾನಿಕ ಮಾದರಿಯೊಂದು ನಮಗೆ ಸಿಕ್ಕಂತಾಗುತ್ತದೆ' ಎಂದು ವಿವರಿಸುತ್ತಾರೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆನೆ ಮತ್ತು ಹುಲಿ ಯೋಜನೆ) ಮನೋಜ್‌ಕುಮಾರ್.

'ನಿರ್ದಿಷ್ಟ ಅವಧಿಯಲ್ಲಿ ಆನೆಗಳು ಗರ್ಭ ಧರಿಸದಂತೆ ನೀಡುವ ಚುಚ್ಚುಮದ್ದು ಮಾತ್ರ ಇದಾಗಿರುತ್ತದೆ. ಉದಾಹರಣೆಗೆ ಮದ್ದು ನೀಡಲಾದ ಹೆಣ್ಣಾನೆಯಲ್ಲಿ ಅದರ ಪ್ರಭಾವ ಒಂದು ವರ್ಷದವರೆಗೆ ಇರುತ್ತದೆ. ಆ ಅವಧಿಯಲ್ಲಿ ಅದೊಂದು ವೇಳೆ ಗಂಡಾನೆ ಸಂಗವನ್ನು ಬೆಳೆಸಿದರೂ ಗರ್ಭ ಧರಿಸುವುದಿಲ್ಲ. ಆದರೆ, ಔಷಧಿ ಪ್ರಭಾವ ನೀಗಿದ ಮೇಲೆ ಮತ್ತೆ ಅದು ಗರ್ಭ ಧರಿಸಬಹುದು' ಎಂದು ಸ್ಪಷ್ಟಪಡಿಸುತ್ತಾರೆ.

ಗರ್ಭ ನಿರೋಧಕ ಚುಚ್ಚುಮದ್ದು ಬಳಕೆಗೆ ಸಂಬಂಧಿಸಿದಂತೆ ಮೊದಲ ಪ್ರಯೋಗಗಳು ನಡೆದಿದ್ದು ಆಫ್ರಿಕಾದಲ್ಲೇ. ಹಾರ್ಮೋನ್‌ಗಳ ಬಿಡುಗಡೆ ತಗ್ಗಿಸುವ ರಾಸಾಯನಿಕ, ಸ್ಟೆರಾಯ್ಡ್‌ಯುಕ್ತ ಹಾರ್ಮೋನ್, ಗರ್ಭನಿರೋಧಕ (immuno contraception) ಮದ್ದು ನೀಡುವಂತಹ ಪ್ರಯತ್ನಗಳು ನಡೆದಿವೆ. ಅದರಲ್ಲಿ ಕೊನೆಯ ವಿಧಾನ ಫಲಪ್ರದ ಎಂಬ ಒಮ್ಮತಾಭಿಪ್ರಾಯಕ್ಕೆ ಅಲ್ಲಿನ ವನ್ಯಜೀವಿ ಸಂರಕ್ಷಣಾಧಿಕಾರಿಗಳು ಬಂದಿದ್ದಾರೆ. ರಾಜ್ಯದಲ್ಲಿ ಪ್ರಯೋಗ ನಡೆಸಲು ಹೊರಟಿರುವುದು ಕೂಡ ಇಂತಹ ಗರ್ಭನಿರೋಧಕ ಚುಚ್ಚುಮದ್ದು ನೀಡುವ ವಿಧಾನವನ್ನೇ.

**ನಿರ್ದಿಷ್ಟ ಅವಧಿಯಲ್ಲಿ ಆನೆಗಳು ಗರ್ಭ ಧರಿಸದಂತೆ ನೀಡುವ ಚುಚ್ಚುಮದ್ದಿನ ಪ್ರಭಾವ ಹೆಣ್ಣಾನೆಯಲ್ಲಿ ಒಂದು ವರ್ಷದವರೆಗೆ ಇರುತ್ತದೆ. ಆ ಅವಧಿಯಲ್ಲಿ ಅದೊಂದು ವೇಳೆ ಗಂಡಾನೆಯ ಸಂಗವನ್ನು ಬೆಳೆಸಿದರೂ ಗರ್ಭ ಧರಿಸುವುದಿಲ್ಲ. ಆದರೆ, ಔಷಧಿ ಪ್ರಭಾವ ನೀಗಿದ ಮೇಲೆ ಮತ್ತೆ ಅದು ಗರ್ಭ ಧರಿಸಬಹುದು.**

ಹೊಲಗಳಿಗೆ ದಾಳಿ

ಚಿತ್ರ: ಎಸ್.ಆರ್.ಮಧುಸೂದನ್

